ಗಡಿಯಾರಗಳ ಕ್ಷಣಗಣನೆ ಒಂದೇ ರೀತಿಯದಾಗಿದ್ದರೆ ಎಲ್ಲರ ಹೃದಯ ಬಡಿತ ಒಂದೇ ತೆರನಾಗಿರುವುದಿಲ್ಲ. ಅಂದರೆ ಒಟ್ಟಾರೆಯಾಗಿ ನಿರಂತರ ಬಡಿತದ ಕಾರಣದಿಂದಷ್ಟೇ ಜೀವಕ್ಕೂ ಗಡಿಯಾರಕ್ಕೂ ಒಂದು ಹೋಲಿಕೆ ಬಂದಿರಬಹುದೇ ಹೊರತು ಬೇರಾವುದೇ ಕಾರಣಕ್ಕಲ್ಲ.

ಚಿಕ್ಕಂದಿನಲ್ಲಿ ಶಾಲೆಯ ಪಠ್ಯದಲ್ಲಿ ಬಂದ ದಿನಕರ ದೇಸಾಯಿಯವರ ಗಡಿಯಾರದ ಪದ್ಯವೊಂದು ನೆನಪಾಗುತ್ತಿದೆ:

‘ಗಂಟೆಯ ನೆಂಟನೆ ಓ ಗಡಿಯಾರ
ಬೆಳ್ಳಿಯ ಬಣ್ಣದ ಗೋಲಾಕಾರ
ವೇಳೆಯ ತಿಳಿಯಲು ನೀನಾಧಾರ
ಟಿಕ್ ಟಿಕ್ ಗೆಳೆಯ ಟಿಕ್ ಟಿಕ್ ಟಿಕ್’

ಗಡಿಯಾರವಿಲ್ಲದ ಅಥವಾ ಅಪರೂಪವಾಗಿದ್ದ ಹಿಂದಿನ ಕಾಲದಲ್ಲಿ ಅದು ಕಾಲಕ್ಕೆ ನೆಂಟನೇ ಹೌದು. ನಮ್ಮಂಥ ಮಕ್ಕಳಿಗೆ, ಮೇಷ್ಟ್ರುಗಳಿಗೆ ವೇಳೆಯ ತಿಳಿಯಲು ಗಡಿಯಾರ ಆಧಾರವೇ ಆಗಿದ್ದಿತು. ಆದರೆ, ಈಗ ಬರೀ ಆಧಾರ ಅಲ್ಲ, ಮೂಲಾಧಾರ ಅನ್ನೋದು ಬೇರೆ ಮಾತು. ಅಂತೂ ಹೊತ್ತಿಗೂ ಗಡಿಯಾರಕ್ಕೂ ಬಿಡಲಾರದ ನಂಟು ಯಾವಾಗಲು. ‘ದುಡಿಯುವುದೊಂದೆ ನಿನ್ನಯ ಕರ್ಮ’ ಎನ್ನುವ ಸಾಲೊಂದನ್ನೇ ಹಿಡಿಯುವ ಮಾಸ್ತರರು, ‘ಕರ್ಮಯೋಗದ ಬಗ್ಗೆ ಹೇಳುವ ಕವಿತೆಯಿದು, ಗಡಿಯಾರದ ಹಾಗೆ ನಾವು ದುಡಿಯಬೇಕು’ ಎಂದು ಪುರಾಣ ಹೇಳುತ್ತಿದ್ದರು. ನಮಗೋ ಆ ಪದ್ಯ ಕೊನೆಗೊಳ್ಳುವ ಬಗೆ ಇದೆಯಲ್ಲ– ಟಿಕ್ ಟಿಕ್ ಟಿಕ್ ಟಿಕ್ ಅನ್ನುವುದು ಒಂದು ರೀತಿಯ ಮೋಜಿನ ಪದಗಳಾಗಿದ್ದವೇ ಹೊರತು ಬೇರಾವುದೂ ಅಲ್ಲ. ಟಿಕ್ ಟಿಕ್ ಅನ್ನುತ್ತಲೆ ಶಾಲೆಯಿಂದ ಮನೆಗೆ ಹೋಗುತ್ತಿದ್ದ ನೆನಪು ನನಗೆ. ಆ ಪದ್ಯ ಆಗ ಗಾಢವಾಗಿ ಕಲಕಿದ್ದು, ಈಗ ಹೃದಯದ ಬಡಿತ ಕೇಳುವಾಗಲೂ ನೆನಪಾಗಿ, ‘ಕಾಲವು ನಿನ್ನದೆ ಎನ್ನುವೆಯೇನು’ ಎನ್ನುವ ಸಾಲು ಪ್ರಧಾನವಾಗಿ, ಆ ಶಿಶು ಗೀತೆಯಲ್ಲಿಯೂ ಅಡಗಿರುವ ಅದ್ಭುತ ಅಂತರಾರ್ಥಕ್ಕೆ ಬೆರಗಾಗುವುದುಂಟು.

ಕ್ಲಾಕ್ ಅಥವಾ ಗಡಿಯಾರ ಕಾಲವನ್ನು ಅಳತೆ ಮಾಡುವ ಯಂತ್ರ ಎಂದೇ ಬಹಳ ಸಾಹಿತಿಗಳು ಭ್ರಮಿಸಿದ್ದಾರೆ ಅನ್ನುವುದು ನನ್ನ ಅಭಿಪ್ರಾಯ. ಅದೊಂದು ಭ್ರಮೆ. ಯಾಕೆಂದರೆ ಗಡಿಯಾರ ಕಾಲವನ್ನು ಅಳತೆ ಮಾಡುವುದಿಲ್ಲ. ಆಗಿ ಹೋಗುವ ಕಾಲವನ್ನದು ತೋರಿಸುತ್ತದೆ, ಅಷ್ಟೇ. ನಮ್ಮ ಆಯುಷ್ಯವು ನಮ್ಮ ಯಾವ ನಿಯಮವನ್ನೂ ಅವಲಂಬಿಸಿರುವುದಿಲ್ಲ. ಗತಿಸಿದ ಕಾಲವನ್ನು ಇಷ್ಟಾಯಿತು ಎಂದಷ್ಟೆ ತೋರಿಸುತ್ತದೆ. ಇನ್ನೆಷ್ಟಿದೆ? ಗೊತ್ತಾಗುವುದಿಲ್ಲ. ಎಲ್ಲವೂ ಒಂದರ್ಥದಲ್ಲಿ ಕ್ಷಣಗಣನೆಯೇ. ಈಗಿನ ಸಮಯ ನಿನ್ನದು, ಮುಂದಿನ ಕ್ಷಣ ನಿನ್ನದಾಗಿರಬಹುದು, ಅಲ್ಲದೇ ಇರಬಹುದು. ಯಾವಕ್ಷಣಕ್ಕೂ ಗೋಡೆಯ ಮೇಲಿನ ಗಡಿಯಾರ ನಿಂತು ಹೋಗುವ ಹಾಗೆ ನಿನ್ನ ಒಳಗಿನ ಟಿಕ್ ಟಿಕ್ ಕೂಡ ನಿಂತು ಹೋಗಬಹುದು. ಯಾವ ಮಾರಾಟಗಾರನೂ ನಿನ್ನ ಗಡಿಯಾರಕ್ಕೆ ವಾರಂಟಿ ಕೊಡುವುದಿಲ್ಲ. ಗಡಿಯಾರ ಬೇರೆ, ನೀನು ಬೇರೆ. ಸುಮ್ಮನೆ ಒಂದಕ್ಕೊಂದು ಸಂಬಂಧ ಹಚ್ಚಬೇಡ. ಹೀಗೆಲ್ಲ ಯೋಚನೆ ಬಂದದ್ದು, ಇತ್ತೀಚೆಗೆ ನಾನು ಹೃದಯದ ಶಸ್ತ್ರಚಿಕಿತ್ಸೆಗೆಂದು ಆಸ್ಪತ್ರೆ ಸೇರಿದಾಗ. ವಾರಗಟ್ಟಲೆ ಸತ್ತು ಬದುಕಿ ಹೊರಬಂದ ಬಳಿಕ ಅನ್ನಿಸಿದ್ದು: ಹೌದಲ್ಲ, ಸದ್ಯಕ್ಕಂತೂ ನನ್ನ ಗಡಿಯಾರ ರಿಪೇರಿಯಾಯ್ತು, ಎಷ್ಟು ಕಾಲ ನಡೆಯುತ್ತೆ ಅನ್ನೋದನ್ನ ನಾವಂತೂ ನಿರ್ಧರಿಸೋಕಾಗಲ್ಲ. ಹಣದಿಂದ ಕಾಲವನ್ನು ಮತ್ತು ಜೀವನವನ್ನು ಕೊಳ್ಳಲಿಕ್ಕಾಗದು ಎನ್ನುವುದನ್ನ ಕೊರೊನಾ ಈಗಾಲೆ ಸಾಧಿಸಿ ತೋರಿಸಿದೆ. **Time and tide waits for none** ಎನ್ನುವ ಗಾದೆ ಮಾತಿನ ಹಾಗೆ. ಈ ಎಲ್ಲ ಜಿಜ್ಞಾಸೆಗಳಲ್ಲಿ ಎಂಥ ಅಧ್ಯಾತ್ಮ ತುಂಬಿದೆ ಅಂತ ಈಗೀಗ ಅನ್ನಿಸತೊಡಗಿದೆ.



●